ಇ) ಈ ಬಗ್ಗೆ ಇದುವರೆವಿಗೆ ಯಾವುದೇ ದೂರು ಬಂದಿಲ್ಲ. ನಿರ್ದಿಷ್ಟ ದೂರುಗಳು ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಅದುದರಿಂದ ಸದರಿ ಪ್ರಿನ್ಸಿಪಾಲರನ್ನು ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಆಧಾರದ ಬಗ್ಗೆ

1181 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ನೇಮಕಾತಿ ಮಾಡಿಕೊಳ್ಳಲಾದ 11,000 ಶಿಕ್ಷಕರನ್ನು ಯಾವ ಆಧಾರದಿಂದ ನೇಮಕಾತಿ ಮಾಡಿಕೊಳ್ಳಲಾಯಿತು?

ಆ) ಈ ನೇಮಕಾತಿ ಮಾಡಿಕೊಳ್ಳುವಾಗ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ಕೊಡಲಾಯಿತೇ?

ಇ) ಹಾಗಿದ್ದಲ್ಲಿ ಇದರಿಂದ ಪ್ರತಿಭಾವಂತ ಅಭ್ಯರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸರ್ಕಾರ ಈ ವಿಷಯದ ಬಗ್ಗೆ ಯಾವುದಾದರೂ ಕ್ರಮಗಳನ್ನು ಕೈಗೊಳ್ಳುತ್ತದೆಯೇ?

ಉ) ಈ ನೇಮಕಾತಿ ಮಾಡುವಾಗ ಪ್ರತಿಭಾವಂತರಿಗೆ ಶೇಕಡಾ ಎಷ್ಟು ಪ್ರಾಶಸ್ತ್ಯ ನೀಡಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಸರ್ಕಾರವು ಅಧಿಸೂಚನೆ ಸಂಖ್ಯೆ ಇಡಿ 25 ಪಿಎಂಎಸ್ 90 ದಿನಾಂಕ 20-12-90 ರಲ್ಲಿ ರೂಪಿಸಿರುವ ವಿಶೇಷ ನಿಯಮಾವಳಿ ಪ್ರಕಾರ ಆಯ್ಕೆ ಮಾಡಲಾಗಿದೆ.

ಆ) ಈ ನೇಮಕಾತಿ ಮಾಡಿಕೊಳ್ಳುವಾಗ 29 ವರ್ಷ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಇ) 29 ವರ್ಷ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡಿದ್ದರೂ ಸಹ ಈ ವಯೋಮಿತಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅರ್ಹತೆಯನ್ನು (ಮೆರಿಟ್) ಪರಿಗಣಿಸಲಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

Dr. Melkote Committee

1156 - SRI P. BASAVARAJU (Bramavara) : Will the Minister for Health and Family Welfare be pleased to state?

a) Whether Dr. Melkote Committee, has submitted its report during 1972 for development of I.S.M & H (Give details)

b) Is it a fact that the Committee recommended for deputation of 5 officers for training at Hyderabad Gandhi Nature Cure College?

c) If so whether it has come to the notice of the Government that the Director of I.S.M & H. has cancelled this deputation?

d) Whether the above decision has been after consulting Naturecure Experts or be appointing a Committee?